ಇದೆಯಲ್ಲ, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಅದು.. ಕಂಗ್ರಾಟ್ಸ್ ಕಣೇ' ಎಂದ ವಿನುತಾ ತನ್ನ ಗ್ಲಾಸ್ ಕೆಳಗಿಟ್ಟು ಎದ್ದು ಹೋಗಿ ರಾಜೋ ಭುಜವನ್ನು ಬಳಸಿದಳು.

'ಓ ಅದಾ...ಏನೋ ಭಾರೀ ಹೆಸರಿದೆಯಲ್ಲವಾ ಅದಕ್ಕೆ... ಕಳ್ಳಿ... ಎಲ್ಲಾ ಸೆಲೆಕ್ಷನ್ ಆದಮೇಲೆ ಹೇಳತೀಯಲ್ಲ...' ಮರುಕ್ಷಣದಲ್ಲಿ ಅಲ್ಲಿ ಖುಷಿಯ ನೊರೆ ಹದವಾಗಿ ಮೂವರನ್ನೂ ತಬ್ಬಿತ್ತು.

ಆಫೀಸಿನ ಗಾಸಿಪ್ಪಿನಿಂದ ಹಿಡಿದು ರಾಜಕಾರಣ, ಸಿನಿಮಾ ಗಾಸಿಪ್ಪಿನವರೆಗೆ ಹರಟೆ, ನಗು. ವಯಸ್ಸಿನ ಹಂಗಿಲ್ಲದೆ.

'ಆ ಹುಡುಗ ಅದೇ ನಿನ್ನ ಜೊತೆ ಒಂದೆರಡು ನಾಟಕದಲ್ಲಿ ಮಾಡಿದ್ದನಲ್ಲ, ಮೋಹನ. ಅವನನ್ನ ಮದುವೆಗಿದುವೆ ಆಗೋ ಸಿಹಿಸುದ್ದಿ ಕೊಡ್ತೀಯ ನೀನು ಅಂದುಕೊಂಡಿದ್ದೆ' ಮೇಗಲೆ ಹೇಳಿದ ನಂತರ, ಕೇಳಬಾರದಿತ್ತೇನೋ ಎಂದು ತುಟಿಕಚ್ಚಿಕೊಂಡಳು. ತುಟಿ ಜಾರಿದ ಮಾತಿನ ಕ್ಷಣವೇ ಕಿವಿ ಸೇರುವ ಕ್ಷಣವೂ ಆಗಿರುತ್ತದೆ. ರಾಜೋ ಮುಖ ತುಸು ಸಪ್ಪಗಾಯಿತು.

'ಮೊದಲು ಅದೇ ಸಿಹಿಸುದ್ದಿ ಕೊಡ್ತೀನಿ ಅಂತ ನಾನೂ ಭ್ರಮಿಸಿದ್ದೆ. ಎನ್ಎಸ್‌ಡಿಗೆ ಹೋಗೋ ವಿಚಾರ ನನ್ನ ತಲೇಲಿ ಇರಲಿಲ್ಲ. ಅಂವ ಕೇಳಿದ ಒಂದು ಪ್ರಶ್ನೆ, ಆ ಒಂದು ಕ್ಷಣ ಇತ್ತಲ್ಲ ಅದು ನನ್ನನ್ನ ಸಮಾ ಪ್ರಪಾತಕ್ಕೆ ನೂಕಿತು ನೋಡು'

'ಏನಾಯ್ತೇ' ವಿನುತಾ ಕೈತಟ್ಟಿದಳು. ರಾಜೋ ಮಾತಾಡದೇ ಒಂದು ಗುಟುಕು ವೈನ್ ಹೀರಿದಳು. ಅರೆಕ್ಷಣದ ನಂತರ ಇಬ್ಬರತ್ತ ನೋಡದೇ ಕೈಯಲ್ಲಿದ್ದ ಗ್ಲಾಸನ್ನೇ ನೋಡುತ್ತ ಮಾತಾಡತೊಡಗಿದಳು.

'ನಾವಿಬ್ಬರೂ ಮದುವೆ ಬಗ್ಗೆ ಆಲ್‌ಮೋಸ್ಟ್ ನಿರ್ಧಾರ ಮಾಡಿದ್ವಿ. ನಾಕೈದು ಸಲ ನನ್ನ ಮನೆಗೆ ಬಂದ, ಉಳಕೊಂಡ. ಇನ್ನೇನು ರಿಜಿಸ್ಟರ್ ಮದುವೆಗೆ ಡೇಟ್ ನೋಡಿ, ನಿಮಗೂ ಹೇಳದು, ಸದ್ಯಕ್ಕೆ ನನ್ನ ಮನೇನೇ ಇರಲಿ, ಆಮೇಲೆ ಬೇರೆ ನೋಡಣ, ಇಬ್ಬರ ಮನೆಯವರಿಗೂ ವಿಷಯ ತಿಳಸದು ಹೀಗೆ ಒಂದು, ಎರಡು, ಮೂರು ಅಂತೆಲ್ಲ ಒಳ್ಳೆ ಸ್ಟೆಪ್‌ವೈಸ್ ಫುಲ್ ಪ್ಲಾನ್ ಮಾಡಿದ್ವಿ. ಆಮೇಲೆ ಒಂದು ದಿನ ನಾಟಕದ ರಿಹರ್ಸಲ್ ಮುಗಿದ ಮೇಲೆ ತಡವಾಗಿತ್ತು. ನನ್ನ ಮನೆಗೆ ಹೋದ್ವಿ. ಆ ದಿನ ನಾ ಸ್ವಲ್ಪ ಸುಸ್ತಾಗಿದ್ದೆ. ಮೋಹನ ಭಾರೀ ಒಳ್ಳೆ ಲಹರಿಯಲ್ಲಿದ್ದ.'

ರಾಜೋ ಈಗ ಸೋಫಾಗೆ ಒರಗಿ ಕಣ್ಣು ಮುಚ್ಚಿಕೊಂಡಳು. ತನಗೇ ಹೇಳಿಕೊಳ್ತಿದ್ದಾಳೇನೋ ಎಂಬಂತೆ ಕಣ್ಣುಮುಚ್ಚಿಕೊಂಡೇ ಹೇಳತೊಡಗಿದಳು.

'ಆ ದಿನ ಅವನಿಗೇನೋ ಹುಕಿ. ಯಾವುದೋ ಒಂದು ವಿಚಿತ್ರ ಆಸನ ಪ್ರಯತ್ನಿಸೋಣ ಅಂತ. ಅಂವಾ ಅದು ಶುರುಮಾಡ್ತಿದ್ದ ಹಂಗೆ ನಂಗೆ ಇಷ್ಟವಾಗಲಿಲ್ಲ, ತಡೆಯಲಾರದ ಕಿರಿಕಿರಿಯೊಂದು ಒಳಗಿಂದ ಒದ್ದುಕೊಂಡು ಬಂದಂತೆ. ಹೊಟ್ಟೆಯಾಳದಿಂದ ಎದ್ದುಕೊಂಡ ಬಂದ ವಿಪರೀತ ನಡುಕ. 'ಪ್ಲೀಸ್, ಈ ಥರಾ ಬ್ಯಾಡ' ಅಂತ್ಹೇಳಿ ಎದ್ದುಬಿಟ್ಟೆ. ಅಂವಾ ಅದನ್ನು ನಿರೀಕ್ಷಿಸಿರಲಿಲ್ಲ ಅಂತ ಕಾಣುತ್ತೆ. ತಕ್ಷಣ 'ಯಾಕೆ ಬೇಡ. ರಿಕ್ಕಿ ಇದೇ ಥರಾ ಮಾಡಿದ್ದನಾ. ಅದು ನೆನಪಾಯ್ತಾ' ಅಂದುಬಿಟ್ಟ. ನನಗೆ ಆ ಕ್ಷಣದಲ್ಲಿ ಖರೇ ಅಂದ್ರೆ ರಿಕ್ಕಿ ನೆನಪಾಗಿರಲೇ ಇಲ್ಲ ಅಥವಾ ರಿಕ್ಕಿ ನನ್ನೊಂದಿಗೆ ಹೀಗೆ ಮಾಡಿರಲೂ ಇಲ್ಲ. ಆ ಪ್ರಶ್ನೆ ಕೇಳಿದ ಮೋಹನನ ದನಿ, ಆ ಮಬ್ಬು ಬೆಳಕಲ್ಲಿ ಅವನ ಮುಖ ಹೊಳೆದ ರೀತಿ, ಅವನು ಕುಳಿತಿದ್ದ ಆ ಹೊಸ ಭಂಗಿ ಎಲ್ಲ ಅಪರಿಚಿತ ಅನ್ನಿಸ್ತು, ಅದೇ ಕ್ಷಣದಲ್ಲಿ ಅವನ ಆ ಸ್ಪರ್ಶ ಎಂದೋ ಹೂತುಹಾಕಿದ್ದ ಇನ್ನೇನನ್ನೋ ನೆನಪಿಸ್ತಾ, ನಾನು ಈ ಒಂದೆರಡು ವರ್ಷದಲ್ಲಿ ಕಂಡಿದ್ದ ಅವನು ಬೇರೆ, ಈ ಪ್ರಾಣಿ ಬೇರೆ ಅನ್ನಿಸಿ, ಈಗ ಎದುರಿಗೆ ಈ ಚಹರೆಯಲ್ಲಿ ಕೂತವನನ್ನು ಇನ್ನೆಂದೂ ಮುಟ್ಟಲಾರೆ ಅನ್ನಿಸ್ತಾ 'ಪ್ಲೀಸ್, ಈಗ್ಲೇ ನನ್ನ ಮನೆಯಿಂದ ಹೊರಗೆ ಹೋಗು' ಅಂತ ಚೀರಿದೆ. ಅಂವಾ ಕಕ್ಕಾಬಿಕ್ಕಿಯಾಗಿಬಿಟ್ಟ. 'ಸಾರಿ, ಸಾರಿ ಕಣೇ' ಅನ್ನುತ್ತ ನನ್ನ ಕೈಹಿಡಿಯಕ್ಕೆ ಬಂದ. 'ನನ್ನ ಮುಟ್ಟಬೇಡ. ಪ್ಲೀಸ್... ಈಗ್ಲೇ ಮೊದ್ಲು ಇಲ್ಲಿಂದ ಹೋಗು. ಹೋಗು ಅಂದ್ರೆ ಹೋಗು' ಅಂತ ಮತ್ತೆ ಹುಚ್ಚಿ ಥರಾ ಚೀರಿದೆ. ಅಂವಾ ಬಾಗಿಲು ದಾಟದ್ದೇ, ರಪ್ ಅಂತ ಬಾಗಿಲು ಮುಚ್ಚಿದೆ.'

ರಾಜೋ ದೀರ್ಘವಾಗಿ ಉಸಿರೆಳೆದುಕೊಂಡಳು. ಮೇಗಲೆ ಎದ್ದು ಬಂದು ರಾಜೋಳ ಆ ಕಡೆ ಪಕ್ಕದಲ್ಲಿ ಕುಳಿತಳು. ಮೆಲ್ಲಗೆ ಅವಳ ತಲೆಯನ್ನು ತನ್ನ ಭುಜಕ್ಕೆ ಆನಿಸಿಕೊಂಡಳು.

ರಾಜೋ ಅತ್ತಳು. ಒಂದೆರಡು ನಿಮಿಷದ ನಂತರ ಕಣ್ಣು, ಮೂಗು ಒರೆಸಿಕೊಂಡಳು. ನೀರು ಕುಡಿದಳು. ಗ್ಲಾಸ್ ತುಟಿಗೆ ತಾಕಿಸಿ, ಇನ್ನೊಂದು ಗುಟುಕು ವೈನ್ ಹೀರಿದಳು.